ದೂರದರ್ಶನದಲ್ಲಿ ಎಲ್ಲದಕ್ಕೂ ಕರೆಯೋರು ನನ್ನ. 'ಕನಕದಾಸ' ಮಾಡ್ದೆ, 'ದಶರಥನ ಭಾಗ್ಯ' ಮುಂತಾದವನ್ನೆಲ್ಲ ಮಾಡಿಕೊಟ್ಟೆ. ಮುಂದೆ ರಂಗಸಂಗೀತ ಜಾಸ್ತಿ ಆಯ್ತು.

◆ **ನಟನೆಯಿಂದ ರಂಗಸಂಗೀತಕ್ಕೆ ಶಿಫ್ಟ್ ಆಗ್ತಾ ಹೋದ್ರಲ್ಲ, ಆಗ ನಿಮಗೆ ಪಾತ್ರಗಳು ಕಡಿಮೆ ಆಗ್ತಾ ಹಾಡುಗಾರಿಕೆ ಜಾಸ್ತಿ ಆಯ್ತು. ಇದರಿಂದ ನಿಮ್ಮೊಳಗಿನ ನಟನಿಗೆ ನಷ್ಟವಾಗಲಿಲ್ಲವೆ?**

ನಿಜ. ಪಾರ್ಟ್ ಮಾಡಲು ಮೊದಲು ಕರೀತಿದ್ರು. ಆಮೇಲೆ ಆಮೇಲೆ ಅವರವರೇ ಪಾರ್ಟ್ ಮಾಡಲು ಶುರು ಮಾಡಿಕೊಂಡ್ರು. ಆದರೆ, ನನ್ನೊಳಗಿದ್ದ ಆ ನಟ ಹಾಡುಗಾರಿಕೆ, ಜನಕಥನ ಕೀರ್ತನದಲ್ಲಿ ಜೀವಂತವಾಗಿದ್ದ. ಸಂಗೀತ ಜಾಸ್ತಿ ಆಯ್ತು.

◆ **ಎಲ್ಲರೂ ಸಂಗೀತ ಕಲೀಬೇಕು ಅಂದರೆ ಶಾಸ್ತ್ರೀಯವಾಗಿ ಗುರುವಿನ ಹತ್ರ ಹೋಗಿ ಕಲಿತಾರೆ. ಆದರೆ ನೀವು ನಾಯಕ ಮೇಷ್ಟ್ರು ರಂಗಸ್ವಾಮಪ್ಪ ಅವರತ್ರ ಸಂಗೀತ ಕಲಿತು ಇಷ್ಟು ದೊಡ್ಡ ಸಾಧನೆ ಮಾಡಿರುವಿರಿ. ಹೇಗೆ ಸಾಧ್ಯವಾಯಿತು?**

ಬಹುಶಃ ನಾಟಕಗಳೇ ನನಗೆ ಕಲಿಸುತ್ತಾ ಹೋದವು ಅನ್ಸುತ್ತೆ. ಅನೇಕ ಪಾತ್ರಗಳನ್ನು ಮಾಡ್ತಾ ಮಾಡ್ತಾ ಹೀಗೆ ಆದೆ ಅನ್ಸುತ್ತೆ. ನಾಟಕದ ಹಾಡುಗಳೇ ಸಂಗೀತ ಆಗೋಯ್ತು. ಅದನ್ನು ನಾನು ಬುದ್ಧಿವಂತಿಕೆಯಿಂದ ಮನೋಧರ್ಮವಾಗಿಸಿಕೊಂಡೆ. 'ಸುಮಬಾಣನೇ ನೀನು, ಸಾಮಾನ್ಯನೇ...' ಅಂತ ಒಂದ ಪದ ಇದೆ. ಇದಕ್ಕೆ ನವರಸಗಳು ಸೇರುವಂತೆ ಹಾಡನ್ನು ಹಾಡ್ತಾ ಇದ್ದೆ. ಲಯಮಟ್ಟುಗಳನ್ನು ಬದಲಿಸಿ ಬದಲಿಸಿ ಹಾಡುತ್ತಿದ್ದೆ. ರಾಮ, ಆಂಜನೇಯ, ಲಕ್ಷ್ಮಣ, ಪರಶುರಾಮ ಮುಂತಾದ ಪೌರಾಣಿಕ ಪಾತ್ರಗಳನ್ನು ಮಾಡಿದ್ದು, ಅವು ನನ್ನನ್ನು ಸಂಗೀತಗಾರನಾಗಿ ಮಾಡಿಬಿಟ್ವು ಅನ್ಸುತ್ತೆ. ನಾಟಕದಲ್ಲಿಯೂ ಒಂದು ಭಾಗ, ಹರಿಕಥೆಯಲ್ಲಿಯೂ ಒಂದು ಭಾಗ, ಮುಂದೆ ಜನಕಥಾಕೀರ್ತನೆ... ಹೀಗೆ ಬಂದೆ. ನಾನೇ ಯಾಕೆ ನಾಟಕ ಬರೆಯಬಾರದು ಅಂತ ಬರವಣಿಗೆಗೆ ಹೋದೆ. ಮುನಿರಂಗಪ್ಪ ಅಂತ ಹಿರಣ್ಣಯ್ಯ ಮಿತ್ರಮಂಡಲಿಯ ಪಾರ್ಟನರ್ ಆಗಿದ್ರು. ಅವರು ನನಗೆ 'ಈ ನಾಟಕ ಕಂಪನಿಯೋರು ಎಡೆಯೂರು 'ಸಿದ್ಧಲಿಂಗೇಶ್ವರ' ನಾಟಕ ಕೊಡಲ್ಲ ಅಂತಾರೆ, ನೀನೇ ಬರೆದುಕೊಡು' ಅಂದ್ರು. ನಾನು 'ಎಡೆಯೂರು ಸಿದ್ಧಲಿಂಗೇಶ್ವರ ವೈಭವ' ಅಂತ ಹರಿಕಥೆ ಮಾಡಿದ್ದ ಅನುಭವವಿತ್ತು. ಹರಿಕಥೆಯನ್ನೇ ನಾಟಕವಾಗಿ ಬರೆದುಕೊಟ್ಟೆ. ಚೆನ್ನಾಗಿ ಆಯ್ತು. ಇಪ್ಪತ್ತೈದಕ್ಕೂ ಹೆಚ್ಚು ಷೋ ಆಗೋಯ್ತು. ಆಮೇಲೆ 'ಮಹಾತಪಸ್ವಿ ತಾಂಡವ', 'ಕನಕದಾಸ', 'ಸೀತಾಕಲ್ಯಾಣ', 'ನೆನಪಿನಂಗಳದಲ್ಲಿ ಗುಬ್ಬಿ ಕಂಪನಿ' ಅಂತ ಗುಬ್ಬಿ ಕಂಪನಿ ಬಗ್ಗೆ ಬರೆದೆ. ಇದು ಪ್ರಿಂಟಾಗಿದೆ. ಗುಬ್ಬಿ ಕಂಪನಿಯ ಹುಟ್ಟು, ಯಾವ್ಯಾವ ನಾಟಕ ಮಾಡ್ತಿದ್ರು, ಯಾರ್‍ಯಾರು ಪಾತ್ರ ಮಾಡ್ತಿದ್ರು... ರಾಜ್‌ಕುಮಾರ್, ನರಸಿಂಹರಾಜು, ಉದಯಕುಮಾರ್... ಎಲ್ಲವನ್ನು ಕುರಿತು ಬರೆದೆ. ಅದು ಎಲ್ಲರಿಗೂ ಹಿಡಿಸ್ತು. ಆಗ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಆರ್. ನಾಗೇಶ್ ಅವರು ಮೈಸೂರಿಗೆ ಕರೆದುಕೊಂಡು ಹೋಗಿ ಆರ್ಟ್ಸ್ ಕಾಲೇಜಿನಲ್ಲಿ 'ಗುಬ್ಬಿ ಕಂಪನಿ'ಯ ಕಥೆ ಹೇಳಿಸಿದ್ದರು. ಜನ ಮೆಚ್ಚಿದ್ದರು.



◆ **ನೀವು ಹರಿಕಥೆಯಲ್ಲಿ ಹೊಸ ಪ್ರಯೋಗಗಳನ್ನು ಮಾಡಿದ್ರಿ. ಅಂಬೇಡ್ಕರ್ ಅವರನ್ನು ತಂದ್ರಿ, ಪಂಪನನ್ನು ತಂದ್ರಿ, ರನ್ನನನ್ನು ತಂದ್ರಿ. ಆ ಕಾಲಘಟ್ಟದಲ್ಲಿ 'ತಳ ಸಮುದಾಯಗಳ ಪುರಾಣ'ಗಳನ್ನು ಹರಿಕಥೆಗೆ ಅಳವಡಿಸುವ ಪ್ರಯತ್ನ ಏನಾದ್ರೂ ಮಾಡುದ್ರಾ?**

ಇಲ್ಲ. ಮಾಡಬೇಕು ಅನಿಸಿತ್ತು. ಆದ್ರೆ ಅಂತಹ ಅವಕಾಶಗಳು ಕೂಡಿ ಬರಲಿಲ್ಲ. ನಾನು